# CONDOLENCE MEETING

## (ಪ್ರೊ. ಶಿವರಾಮು ಕಾಡನಕುಪ್ಪೆಯವರಿಗೆ ನುಡಿನಮನ)

## 1ST AUGUST 2018


























**ಪ್ರೊ. ಶಿವರಾಮು ಕಾಡನಕುಪ್ಪೆಯವರ** ನಿಧನ ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟ, ನೇರ ನಡೆ ನುಡಿಯ ದಕ್ಷ ಆಡಳಿತಗಾರರೊಬ್ಬರನ್ನು ನಾವಿಂದು ಕಳೆದುಕೊಂಡಿದ್ದೇವೆ ಎಂದು ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿಗಳಾದ ಪಿ.ವಿಶ್ವನಾಥ್ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಏರ್ಪಡಿಸಿದ್ದ ಪ್ರೊ.ಶಿವರಾಮು ಕಾಡನಕುಪ್ಪೆಯವರಿಗೆ ನುಡಿ ನಮನ ಸಂಸ್ಮರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಕುವೆಂಪು ಅವರ ವಿಶ್ವಮಾನವ ಸಂದೇಶದಲ್ಲಿ ಅಪಾರವಾದ ನಂಬಿಕೆಯನ್ನು ಇಟ್ಟಿದ್ದ ಶ್ರೀಯುತರ ಅವಧಿಯಲ್ಲಿ ಕಾಲೇಜು ಅಭಿವೃದ್ಧಿಯ ಪಥದಲ್ಲಿ ಸಾಗಿತ್ತು ಹಾಗೂ ಅವರ ದೂರದೃಷ್ಟಿತ್ವದ ಯೋಜನೆ ಎಂದರೆ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಕಾಲೇಜನ್ನು ತೆರೆಯುವಂತೆ ಆಡಳಿತ ಮಂಡಳಿಯನ್ನು ಅವರು ಒತ್ತಾಯಿಸಿದ್ದರು. ಕಾರಣಾಂತರದಿಂದ ಅದು ನೆರವೇರಲಿಲ್ಲ ಎಂದ ಅವರು ಕನ್ನಡ ಸಾಹಿತ್ಯ ಸಾರಸ್ವತ ಲೋಕಕ್ಕೆ ವಸುಂಧರೆ, ಕುಕ್ಕರಹಳ್ಳಿ, ಆಸ್ಪತ್ರೆಯಲ್ಲಿ 54 ದಿನಗಳು, ಸಾಮಾಜಿಕ ನೆಲೆ, ಕುವೆಂಪು ಸಾಹಿತ್ಯ ಮತ್ತು ವಿಮರ್ಶೆ, ವಿನಾಯಕ ಒಂದು ಅಧ್ಯಯನ ಸೇರಿದಂತೆ ಮುಂತಾದ ಮಹತ್ವದ ಕೃತಿಗಳನ್ನು ನೀಡಿದಂತಹ ಶಿವರಾಮು ಕಾಡನಕುಪ್ಪೆಯವರು ವಿಚಾರವಾದಿ ಒಕ್ಕೂಟದ ಕಾರ್ಯದರ್ಶಿಯಾಗಿ, ಮೈಸೂರು

ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ ಸದಸ್ಯರಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀಯುತರ ಕೊಡುಗೆ ಅಪಾರವಾಗಿದೆ ಎಂದು ಅಭಿಪ್ರಾಯ ಪಟ್ಟರು.













ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಮರೀಗೌಡರು ಮೂರೂವರೆ ದಶಕಗಳ ಕಾಲ ಪ್ರೊ.ಕಾಡನಕುಪ್ಪೆಯವರು ನೀಡಿದ ಬೋಧನೆ ಹಾಗೂ ಆಡಳಿತದ ಬಗ್ಗೆ ಸ್ಮರಿಸುತ್ತಾ ಅವರ ಸಾಹಿತ್ಯಕ ಕೊಡುಗೆಗಳ ಬಗ್ಗೆ ತಿಳಿಸಿದರಲ್ಲದೆ, 20 ವರ್ಷಗಳ ಕಾಲ ತಮಗೆ ಆವರಿಸಿದ್ದ ಖಾಯಿಲೆಯನ್ನು ತಮ್ಮ ಅದಮ್ಯವಾದ ಮನೋಸ್ಥೈರ್ಯದಿಂದ ಎದುರಿಸಿ ಬದುಕಿದ್ದ ಬಗ್ಗೆ ಸ್ಮರಿಸಿದರು.

ಸಂಸ್ಥೆಯ ಕೋಶಾಧ್ಯಕ್ಷ ಎಸ್.ಎನ್.ಲಕ್ಷ್ಮೀನಾರಾಯಣ, ಸಂಸ್ಥೆಯ ಅಧ್ಯಕ್ಷರಾದ ಗುಂಡಪ್ಪಗೌಡರು, ಡಾ.ಎಂ.ಶಿವಲಿಂಗೇಗೌಡರು, ಪ್ರಥಮ ಬ್ಯಾಚ್‌ನ ನೇರ ಶಿಷ್ಯ ಹಾಗೂ ಸಹೋದ್ಯೋಗಿಯಾಗಿದ್ದ ಪ್ರೊ.ಹೆಚ್.ಜೆ.ಚಂದ್ರಶೇಖರ್ ಹಾಗೂ ಧನಂಜಯ ಪಾಲಹಳ್ಳಿ ಅವರು ಪ್ರೊ. ಶಿವರಾಮ ಕಾಡನಕುಪ್ಪೆ ಅವರ ಜೀವನ ಹಾಗೂ ಸಾಧನೆಯ ಬಗ್ಗೆ ತಿಳಿಸಿದರು. ಬೋಧಕ ಮತ್ತು ಬೋಧಕೇತರರು ಭಾಗವಹಿಸಿದ್ದ ಸಂಸ್ಮರಣಾ ಸಭೆಯಲ್ಲಿ ಒಂದು ನಿಮಿಷದ ಮೌನಾಚರಣೆಯನ್ನು ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.